Sri ANGADI CHANNABASAPPA.—Such things are happening every day.

Mr. SPEAKER.—That amount does not reach.........

Sri ANGADI CHANNABASAPPA.—Some middleman must have taken.

Mr. SPEAKER.—That is why I said—give instances. Here it is not the case of middleman. Middleman does not get.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಧ್ಯವರ್ತಿಗಳ ಪ್ರಭಾವದಿಂದಾಗಿ ರೈತರಿಗೆ ನೇರವಾಗಿ ಕೊಡುವ ಸಾಲದ ಹಣ ರೈತರುಗಳ ಕೈಗೆ ಸಿಗುತ್ತಿಲ್ಲ. ರೈತರಲ್ಲದವರಿಗೆ ಸರಕಾರ ವಾಲಕೊಂಡು ಖಾಲಿ 5-6 ತೆಂಗಿನ ಸಸಿಗಳನ್ನು ಹಾಕಿಕೊಂಡು ಇರುವಂತಹವರಿಗೆ ಬಾವಿ ತೆಗೆಯಲು 3,000ರಷ್ಟು ಸಾಲ ಕೊಟ್ಟಿದ್ದಾರೆ. ಆದರೆ ಅಲ್ಲಿ ಬಾವಿ ತೆಗೆದಿದ್ದಾರೆಯೇ ಎನ್ನುವುದನ್ನು ನೋಡಿದರೆ ಅಲ್ಲಿ ಬಾವಿ ಇರುವುದಿಲ್ಲ ಮತ್ತು ಇದನ್ನು ತನಿಖೆ ಮಾಡುವವರೂ ಇಲ್ಲ. ಯಾರು ನಿಜವಾಗಿ ಆಹಾರ ಧಾನ್ಯಗಳನ್ನು ಬೆಳೆಸಿಕೊಂಡು ಅನುಕೂಲ ಮಾಡಿಕೊಳ್ಳಬೇಕು ಎಂದು ಸಾಲಕ್ಕಾಗಿ ಬೇಡುತ್ತಾರೋ ಅವರುಗಳು ತಾಲ್ಲೂಕು ಡೆವಲಪ್‌ಮೆಂಟು ಬೋರ್ಡು ಮತ್ತು ಸಹಕಾರ ಸಂಘಗಳೆಂದು ಮಾಡಿದ್ದರೂ ಕೂಡ ಅಲ್ಲಿರುವ ಮಧ್ಯವರ್ತಿಗಳ ಕಾಟದಿಂದಾಗಿ ಅದರಿಂದ ಎಷ್ಟು ಪ್ರಯೋಜನವಾಗಬೇಕೆಂದಿದೆಯೋ ಅಷ್ಟು ಫಲ ರೈತರಿಗೆ ಸಿಗುತ್ತಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಅದಕ್ಕಾಗಿ ನಾನು ಸೂಚಿಸುವುದು ಈ ದೇಶದಲ್ಲಿರುವ ಎಲ್ಲ ಬ್ಯಾಂಕುಗಳ ಮೂಲಕ ಹೆಚ್ಚಿನ ಸಾಲಗಳನ್ನು ರೈತರು ಪಡೆಯಲು ಅನುಕೂಲವಾಗಲಿ ಎಂದು ಮಾಡಿದ್ದರೂ ರೈತರು ಅವುಗಳನ್ನು ಪಡೆಯುವಂತಹ ಅನುಕೂಲ ಸ್ಥಿತಿಯಿಲ್ಲಿಲ್ಲ. ಮೊನ್ನೆ ರಿಸರ್ವ್ ಬ್ಯಾಂಕಿನವರು ಕೊಟ್ಟಿರುವ ಅಂಕೆ ಸಂಖ್ಯೆಗಳು 1963ನೇ ಮಾರ್ಚಿಯವರೆಗೆ ಕೊಟ್ಟಿರುವುದನ್ನು ನೋಡಿದರೆ 1,611 ಕೋಟಿಯಷ್ಟು ಇಡೀ ದೇಶದಲ್ಲಿ ಸಾಲ ಕೊಟ್ಟಿದ್ದಾರೆಂದೂ, ಅದರಲ್ಲಿ ರೈತರಿಗಾಗಿ ಖಾಲಿ ಮೂರು ಕೋಟಿಯಷ್ಟು ಮಾತ್ರ ಕೊಟ್ಟಿದ್ದಾರೆಂದು ಇದೆ. ಇದರಿಂದ ರೈತರ ಮೇಲೆ ಎಷ್ಟು ಆಸಕ್ತಿ ಇದೆ ಎನ್ನುವುದು ತಿಳಿಯುತ್ತದೆ. ಅವರುಗಳೇ ಒದಗಿಸಿರುವ ಶೇಖಡಾವಾರು ಪಟ್ಟಿಯನ್ನು ನೋಡುವಾಗ ಶೇಕಡ 47ರಷ್ಟು ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳಿಗೂ, 32ರಷ್ಟು ವ್ಯಾಪಾರಸ್ಥರಿಗೆ ಸಾಲಗಳನ್ನು ಕೊಟ್ಟಿದ್ದಾರೆ. ರೈತರುಗಳಿಗಾಗಿ ಶೇಖಡಾ 3ರಷ್ಟು ಎಂದು ಕೊಡಲಾಗಿದೆ. ರೈತರಿಗೆ ಬ್ಯಾಂಕುಗಳಿಂದ ಹೆಚ್ಚಿನ ಫಲ ದೊರೆಯುತ್ತಿಲ್ಲ. ಆದುದರಿಂದ ಈ ಬ್ಯಾಂಕುಗಳ ನ್ಯಾಷನಲೈಸೇಷನ್ನು ಎಂದರೆ ರಾಷ್ಟ್ರೀಕರಣವನ್ನು ಮಾಡಿದರೆ ಮೈಸೂರು ರಾಜ್ಯ ಅಭಿವೃದ್ಧಿಯಾಗುತ್ತದೆ. ರಾಜ್ಯದ ಅಭಿವೃದ್ಧಿಯಾಗಬೇಕಿದ್ದರೆ ರೈತರ ಜೊತೆಗೆ ಪ್ರಾಮುಖ್ಯವಾದ ಅದರಲ್ಲೂ ಹೊಲದ ಉಳುಮೆ ಮಾಡುವವರಿಗೆ ಹೆಚ್ಚಿನ ಸಹಾಯಗಳನ್ನು ಒದಗಿಸಿದರೆ ರೈತರೂ ಆಸಕ್ತಿ ವಹಿಸಿ ನಮ್ಮ ದೇಶದಲ್ಲಿ ಹೆಚ್ಚಿನ ಆಹಾರ ಉತ್ಪತ್ತಿ ಮಾಡಲು ಅನುಕೂಲವಾಗುತ್ತದೆ ಮತ್ತು ನಮ್ಮ ದೇಶದ ಅಭಿವೃದ್ಧಿ ಹೆಚ್ಚಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲವೆ ಬ್ಯಾಂಕುಗಳಿಗೆ ಇಂತಿಷ್ಟು ಪರ್ಸೆಂಟು ಸಾಲಗಳನ್ನು ರೈತರಿಗಾಗಿ ಒದಗಿಸಿ ಕೊಡಬೇಕೆಂದು ಕಾನೂನು ಮಾಡಬೇಕು ಎಂದು ತಾವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವಂತೆ ಈ ಸಂದರ್ಭದಲ್ಲಿ ಹೇಳುತ್ತೇನೆ.

5-30 P.M.

Mr. SPEAKER.—Does he want the State Government to do it or the Central Government to do it?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸೆಂಟ್ರಲ್ ಗೌರ್ನಮೆಂಟಿಗೆ ಬರೆಯಲಿ. ಇಲ್ಲಿಯ ರೆಕಮೆಂಡೇಷನ್ ಆದರೆ ಅವರು ಮಾಡಿಕೊಡುತ್ತಾರೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹೆಚ್ಚಾಗಿ ಬರುತ್ತದೆ. ಮೈಸೂರು ಸರ್ಕಾರದ ಕೆಲವು ವಿಷಯಗಳನ್ನು ತೆಗೆದುಕೊಂಡರೆ ಇವರು ನಿದ್ದೆ ಮಾಡುತ್ತಾ ಇದ್ದಾರೆ. ವಸ್ತು ಸ್ಥಿತಿ ಗೊತ್ತಿಲ್ಲ, ಮೂರನೇ ಪಂಚವಾರ್ಷಿಕಯೋಜನೆಯಲ್ಲಿ ಕೇಂದ್ರ ಸರ್ಕಾರದವರು ನೆರೆಯ ನಿಯಂತ್ರಣಕ್ಕೋಸ್ಕರ 60ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಅದರಲ್ಲಿ ಮೈಸೂರು ರಾಜ್ಯಕ್ಕೆ ಒಂದು ಪೈ ಕೂಡ ಸಿಕ್ಕಿಲ್ಲ. ಅದರ ಅಂದಾಜು ಪಟ್ಟಿಯನ್ನು ಕಳಿಸಿಕೊಟ್ಟಿಲ್ಲ. ಈ ಬಗ್ಗೆ ಇನ್ನೊಂದು ಮನೆಯಲ್ಲಿ ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಮೈಸೂರು ರಾಜ್ಯದಲ್ಲಿ ಎಲ್ಲಿ ನೆರೆ ಬರುತ್ತದೆ. ಎಲ್ಲಿ ನೆರೆ ಬರುತ್ತದೆಂಬ ವಿಷಯ ಅವರಿಗೆ ಗೊತ್ತಿಲ್ಲ. ಮೈಸೂರು ರಾಜ್ಯದಲ್ಲಿ ನೆರೆಯೇ ಇಲ್ಲ ಎಂದು ಹೇಳಿದ್ದಾರೆ. ಅದು ಪೇಪರ್‌ನಲ್ಲಿ ಬಂದಿದೆ ವಸ್ತುತಃ

ಯಾವ ಯಾವ ಜಿಲ್ಲೆಯಲ್ಲಿ ಹೇಗಿದೆ ಎಂಬುದು ಮೈಸೂರು ಆಡಳಿತದವರಿಗೆ ಗೊತ್ತಿಲ್ಲ. ನೆರೆಯ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರದವರು ಒದಗಿಸಿರತಕ್ಕ 60 ಕೋಟಿ ರೂಪಾಯಿನಲ್ಲಿ ಮೈಸೂರು ರಾಜ್ಯಕ್ಕೆ ಒಂದು ಪೈ ಕೂಡ ಸಿಕ್ಕಿಲ್ಲವೆಂಬುದು ಬಹಳ ವಿಷಾದಕರ. ನನ್ನ ಕ್ಷೇತ್ರದಲ್ಲಿ ಒಂದು ಸಣ್ಣ ನದಿ ಹರಿಯುತ್ತದೆ. 5 ಮೈಲಿ ಉದ್ದ ಕೂಕ್ಕು ಬೆಳಗು ಎಂಬ ಗ್ರಾಮದಿಂದ ಪಂಗಳ ಎಂಬ ಗ್ರಾಮಕ್ಕೆ ಹೋಗುತ್ತದೆ. ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ಅನೇಕ ಸಲ ತಂದಿರುತ್ತೇನೆ. ಮತ್ತು ಬರೆದೂ ಇದ್ದೇನೆ. ಅಲ್ಲಿ ನೆರೆಯ ನೀರು ಬಂದು 4 ಸಾವಿರ ಎಕರೆ ಭೂಮಿಯಲ್ಲಿ ಒಂದನೇ ಮತ್ತು ಎರಡನೇ ಬೆಳೆಯೂ ಕೂಡ ಆಗುವುದಿಲ್ಲ. ಅದರ ಮೇಲೆ ನೀರು ನಿಂತು ಬೆಳೆ ಆಗದೆ ಇರುವ ಪರಿಸ್ಥಿತಿ ಇದೆ. ಮಾತ್ರವಲ್ಲದೆ ಆ ನದಿಯನ್ನು ಆಳ ಮಾಡಿ ಸಿಲ್ಟ್ ತೆಗೆದು ಅದರ ದಂಡೆಯನ್ನು ಸ್ವಲ್ಪ ಎತ್ತರಿಸಿದರೆ ಒಂದನೇ ಬೆಳೆ ಎರಡನೇ ಬೆಳೆ ಆಗುವುದಲ್ಲದೆ ಮೂರನೆಯ ಬೆಳಗ್ಗೆ ಆ ನದಿಯಲ್ಲಿ ನೀರು ಸಿಕ್ಕುವುದಕ್ಕೆ ಸಾಧ್ಯ ಉಂಟು. ಇದು ದೊಡ್ಡ ಯೋಜನೆ. ಇದನ್ನು ಕಾರ್ಯಗತ ಮಾಡಬೇಕೆಂದು ನಾವು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಬರೆದಿದ್ದೆವು. ಅದಕ್ಕೆ ಅವರು ಇದು ನಮ್ಮ ಕೆಲಸವಲ್ಲ ನಮ್ಮಲ್ಲಿ ಹಣವಿಲ್ಲ ನೆರೆಯ ನಿಯಂತ್ರಣದ ಇಲಾಖೆಯನ್ನು ನೋಡಿ ಎಂದು ಹೇಳಿದರು. ಆದರೆ ಮೈಸೂರು ರಾಜ್ಯಕ್ಕೆ ನೆರೆಯ ನಿಯಂತ್ರಣಕ್ಕೆ ಕೇಂದ್ರ ಸರ್ಕಾರದಿಂದ ಯಾವ ಹಣವೂ ಬರಲಿಲ್ಲ. ಇಂಥಾ ಕೆಲಸಗಳನ್ನು ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಒಂದು ವರ್ಷಕ್ಕೆ 8 ಸಾವಿರ 10 ಸಾವಿರ ಮುಡಿ ಬತ್ತವನ್ನು ಬೆಳೆಯುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರ 20ನೇ ಒಂದು ಅಂಶವನ್ನಾದರೂ ಆ ನದಿಯಿಂದ ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವುಂಟು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾತ್ರವಲ್ಲದೆ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರತರ ಬತ್ತದ ಕೃಷಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಬರುವ ಮೂರು ವರ್ಷಗಳಲ್ಲಿ ಅದಕ್ಕಾಗಿ ಸರ್ಕಾರದವರು ಎರಡೂ ಕಾಲು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆ ಯೋಜನೆಗೆ ಸರ್ಕಾರದವರು ಖರ್ಚು ಮಾಡುವುದು 2¼ ಲಕ್ಷ ರೂಪಾಯಿಗಳು. ಅದರಲ್ಲಿ 70 ಪರ್ಸೆಂಟ್ ಹಣವನ್ನು ತೀವ್ರತರ ಯೋಜನೆಯನ್ನು ಜಾರಿ ಮಾಡಲು ಅಧಿಕಾರಿಗಳಿಗೆ ಖರ್ಚುಮಾಡುತ್ತಾರೆ. ಎಂದರೆ ಅಧಿಕಾರಿಗಳ ಸಂಬಳ ಸಾರಿಗೆ ವಗೈರೆಗಳಿಗೆ ಖರ್ಚು ಮಾಡುತ್ತಾರೆಂದು ನನ್ನ ತಿಳುವಳಿಕೆಗೆ ಬಂದಿದೆ. ಹಾಗಿದ್ದ ಪಕ್ಷದಲ್ಲಿ ಇಂಥಾ ಯೋಜನೆಯನ್ನು ತಂದು ಖಜಾನೆಯಿಂದ ದುಡ್ಡನ್ನು ಖರ್ಚುಮಾಡುವುದರಿಂದ ಜನರಿಗೆ ಏನೂ ಪ್ರಯೋಜನವಾಗಲಾರದು. ಆ ಯೋಜನೆಯನ್ನು ಜಾರಿಮಾಡುವುದಕ್ಕೆ 18 ಜನ ಅಧಿಕಾರಿಗಳನ್ನು ಕಳುಹಿಸಿ ಅವರಿಗೆ ಒಂದು ಜೀಪನ್ನೂ ಕೊಡುತ್ತಾರೆ. 2¼ ಲಕ್ಷ ರೂಪಾಯಿನಲ್ಲಿ ಒಂದು ಲಕ್ಷ 80 ಸಾವಿರ ರೂಪಾಯಿಗಳು ಸಿಬ್ಬಂದಿ ವಗೈರೆ ಖರ್ಚಿಗೇ ಹೋಗುವುದಾದರೆ ಇನ್ನೂ ಉಳಿದಿರತಕ್ಕ 50ಸಾವಿರ ರೂಪಾಯಿಗಳಲ್ಲಿ ರೈತರು ಪ್ರಯೋಜನವನ್ನು ಪಡೆಯುವಂತಾಗುತ್ತದೆಯೇ? ಇಷ್ಟೆಲ್ಲಾ ಕಷ್ಟ ಬೇಡ. ಬ್ಲಾಕ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ಅಧಿಕಾರಿಗಳು ಕೆಲಸವಿಲ್ಲದೆ ತಿರುಗಾಡುತ್ತಿರುತ್ತಾರೆ, ಆದ್ದರಿಂದ ಅದನ್ನು ತೆಗೆದುಬಿಡಿ ಎಂದು ನಮ್ಮ ಮಿತ್ರರು ಹೇಳುತ್ತಾರೆ. ಹೀಗಿರುವ ಸಂದರ್ಭದಲ್ಲಿ ಅಂಥವರಿಗೆ ಈ ಕೆಲಸವನ್ನು ವಹಿಸಿ ತೀವ್ರತರ ಕೃಷಿ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೆ ತರಬಹುದು. ಇನ್ನೂ ಅಧಿಕ ಖರ್ಚಿನ ಭಾರವನ್ನು ಹೊರಬಾರದು ಎಂದು ನಾನು ಹೇಳುತ್ತೇನೆ

ಇನ್ನು ಫಿಷರಿ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ನನ್ನ ಮಿತ್ರರು ಅನೇಕರು ಹೇಳಿದ್ದಾರೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪ್ಪಿನ ಯಾರ್ಡುಗಳು ಇವೆ. ಅಲ್ಲಿ ಉಪ್ಪಿನ ಯಾರ್ಡುಗಳು ಇದ್ದರೂ ಅಲ್ಲಿ ಉಪ್ಪಿಗೆ ಬಾಕಿ ಕಡೆಗಿಂತ ಹೆಚ್ಚಿನ ಧಾರಣೆಯಿದೆ, ಅಲ್ಲಿ ಉಪ್ಪು ಮಾರ್ಕೆಟ್ ರೇಟಿಗಿಂತ ಜಾಸ್ತಿಯಾಗಿದೆ. ಉಪ್ಪಿನ ಸಬ್ಸಿಡಿ ಕ್ರಮ ಏನಿತ್ತೋ ಅದನ್ನು ಸರ್ಕಾರದವರು ನಿಲ್ಲಿಸಿಬಿಟ್ಟಿದ್ದಾರೆ. ಸಬ್ಸಿಡಿ ಕೊಡದೆ ಉಪ್ಪಿನ ಯಾರ್ಡುಗಳನ್ನು ಇಟ್ಟುಕೊಂಡು ಅಲ್ಲಿನ ನೌಕರರುಗಳಿಗೆ ಸಂಬಳ ಸಾರಿಗೆಯನ್ನು ಕೊಟ್ಟು ಅದನ್ನು ನಡೆಸಿಕೊಂಡು ಹೋಗುವುದು ಅನಾವಶ್ಯಕ. ಒಂದುವೇಳೆ ಉಪ್ಪಿನ ಸಬ್ಸಿಡಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಯಾರ್ಡುಗಳನ್ನು ತೆಗೆದುಬಿಡಬೇಕು. ಆಹಾರೋತ್ಪಾದನೆಯಲ್ಲಿ ಮೀನಿನ ಉತ್ಪಾದನೆ ಬಹಳ ಪ್ರಾಮುಖ್ಯವಾದ ಪಾತ್ರವನ್ನು ಹೊಂದಿದೆ. ಮೀನಿನ ಉತ್ಪಾದನೆ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಕರಾವಳಿಯಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಹೊಂದುವಂತೆ ಮಾಡಲು ಅದಕ್ಕೆ ಬೇಕಾದ ಕಾರ್ಯಕ್ರಮವನ್ನು ಮೀನುಗಾರಿಕೆಯ ಇಲಾಖೆಯವರು ತೆಗೆದುಕೊಂಡಿದ್ದಾರೆ. ಮೊನ್ನೆ ಮಾನ್ಯ ಮೀನುಗಾರಿಕೆ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಅವರು ಐಸ್ ಕೋಲ್ಡ್ ಸ್ಟೋರೇಜ್ ಫ್ಯಾಕ್ಟ್ರಿಯನ್ನು ಉದ್ಘಾಟನೆ ಮಾಡಿದರು. ಮಾತ್ರವಲ್ಲದೆ ಮಿಕ್ಕವರ ಕಷ್ಟಸುಖಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆ ವಿಷಯದಲ್ಲಿ ತುಂಬಾ ಸಂತೋಷವಿದೆ. ನಾನು ಹೇಳುವುದೇನೆಂದರೆ ಅಲ್ಲಿರತಕ್ಕವರಿಗೆ ಮೀನುಗಾರಿಕೆಯ ಇಲಾಖೆಯವರು ಮೆಕಾನೈಜ್ಡ್ ಬೋಟುಗಳನ್ನು ಕೊಡುವಾಗ ಸ್ವಲ್ಪ ಚೆನ್ನಾಗಿ ಆಲೋಚನೆಮಾಡಿ ನೋಡಬೇಕು. ದೊಡ್ಡ ದೊಡ್ಡ ಫಿಷರ್‌ಮನ್, ಲಕ್ಷಾಧೀಶ್ವರರು ಇಂಥವರ ಶಿಫಾರಸ್ಸಿನ ಮೇಲೆ ಬೋಟುಗಳನ್ನು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ನಷ್ಟೋತ್ರಿ ಮಾಡಬೇಡಿ. ಅವರು ಅನುಕೂಲಸ್ಥರು. ಫಿಷರಮನ್ ಜಾತಿಯಲ್ಲಿ 100ಕ್ಕೆ 99 ಜನ ಬಡವರು ಇದ್ದಾರೆ. ಅವರ ವಿಷಯವನ್ನು ಕನಿಕರದಿಂದ ನೋಡುವುದು ಅವಶ್ಯ ಇದೆ. ಆದ್ದರಿಂದ ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಅವರು ಟ್ರೈನಿಂಗ್ ಪಡೆದುಕೊಳ್ಳುತ್ತಾರೆ. ನಾಲ್ಕು ಜನ ಟ್ರೈನೀಸಿಗೆ ಒಂದು ಬೋಟನ್ನು ಕೊಡುತ್ತೇವೆ. ಐಶ್ವರ್ಯವಂತರು ಬಡವರು ಎಂದೇನು ನಾವು ನೋಡುವುದಿಲ್ಲ. ಯಾರು ಫಿಷಿಂಗ್ ಟ್ರೈನಿಂಗ್ ತೆಗೆದುಕೊಳ್ಳುತ್ತಾರೆಯೋ ಅವರೆಲ್ಲರಿಗೂ ಬೋಟುಗಳನ್ನು ಕೊಡುತ್ತಾ ಬರುತ್ತಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಟ್ರೈನಿಂಗ್ ಪಡೆದುಕೊಂಡಿರುವವರಿಗೆ ಮಾತ್ರ ಬೋಟುಗಳನ್ನು ಕೊಡುತ್ತಾ ಇಲ್ಲ. ಟ್ರೈನಿಂಗ್ ಆಗದೇ ಇರುವವರಿಗೂ ಬೋಟನ್ನು ಕೊಡುತ್ತಾರೆ. ಒಂದು ಬೋಟಿನಲ್ಲಿ ನಾಲ್ಕೈದು ಜನಗಳಿದ್ದರೆ ಅದರಲ್ಲಿ ಒಬ್ಬರು ಟ್ರೈನ್ಡ್ ಹ್ಯಾಂಡ್ ಇರಬೇಕೆಂದು ಷರತ್ತು ಇದೆ. ಅದನ್ನು ಬೇಕಾದರೆ ತೋರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಯಾವುದಾದರೂ ನ್ಯಾಯತಪ್ಪಿ ಕೊಟ್ಟ ಪ್ರಕರಣ ಉಂಟೋ ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಂದೇ ಕಡೆ ನಾಲ್ಕೈದು ಬೋಟುಗಳನ್ನು ಕೊಟ್ಟಿದ್ದಾರೆ. ಬಾಕಿ ಕಡೆಯೂ ಕೊಡಬೇಕು. ಬಾಕಿಕಡೆ ಬಡವರು ಇದ್ದಾರೆ. ಅವರಿಗೆ ಬೋಟುಗಳನ್ನು ಕೊಡದಿದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ 1964–65ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಸಾಲಿನ ಆಯವ್ಯಯದ ಒಂದು ಪಟ್ಟಿಯನ್ನು ನಾವು ನೋಡುವುದಾದರೆ ಕಳೆದ ಸಾಲಿನಲ್ಲ ಏನು ವಿಷಯಗಳನ್ನು ಅಡಕ ಮಾಡಿದ್ದರೋ ಅದಕ್ಕಿಂತ ಕೆಲವು ಅಂಶಗಳನ್ನು ಹೆಚ್ಚಿಗೆ ಈ ರಾಜ್ಯದಲ್ಲಿ ಪ್ರಾರಂಭಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಅದಕ್ಕಾಗಿ ಹಣವನ್ನು ಒದಗಿಸತಕ್ಕ ಪ್ರಯತ್ನಗಳನ್ನು ಮಾಡುತ್ತೇವೆಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದರಲ್ಲಿ ಬಹಳ ಮಹತ್ವವಾದುದು ವೃದ್ಧಾಪ್ಯ ವಿಶ್ರಾಂತಿ ವೇತನಗಳು ಮತ್ತು ಕುಟುಂಬ ವಿಶ್ರಾಂತಿ ವೇತನಗಳು ಮತ್ತು ಕಡಿಮೆ ಸಂಬಳವನ್ನು ಪಡೆಯತಕ್ಕ ನೌಕರರುಗಳಿಗೆ ತುಟ್ಟಿ ಭತ್ಯವನ್ನು ಜಾಸ್ತಿಮಾಡುವುದು ಇತ್ಯಾದಿಗಳು ಇವೆ. ಇವುಗಳಿಗೆ ಆದಷ್ಟು ಬೇಗ ಹಣವನ್ನು ಒದಗಿಸುತ್ತೇವೆ, ಇವುಗಳನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಟ್ಟಿದ್ದಾರೆ. ಅವರು ಮುಂದಿನ ಸಾಲಿನಲ್ಲಿ ನಾನಾ ಇಲಾಖೆಗಳಲ್ಲಿ ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ ಎನ್ನುವುದನ್ನು ಕೂಡ ವಿವರವಾಗಿ ವಿಶದವಾಗಿ ಹೇಳಿದ್ದಾರೆ.

ನಾನು ಎಲ್ಲವನ್ನೂ ಚರ್ಚೆ ಮಾಡಿದೆ. ನನಗೆ ಒಂದೆರಡು ವಿಚಾರಗಳಲ್ಲಿ ಉಂಟಾಗಿರತಕ್ಕ ಸಂಶಯದ ಕಡೆಗೆ ಅವರ ಗಮನವನ್ನು ಸೆಳೆಯಲು ಪ್ರಯತ್ನಪಡುತ್ತೇನೆ. ಮೊಟ್ಟಮೊದಲನೆಯದಾಗಿ ದೊಡ್ಡ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ಅವರು ಪ್ರಸ್ತಾಪ ಮಾಡಿದ್ದಾರೆ. ಮುಂದಿನ ಸಾಲಿಗೆ ಬೇಕಾದ ಹಣದ ಅವಶ್ಯಕತೆ ಏನು ಎಂದು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದೊಂದೇ ಸಂದರ್ಭದಲ್ಲಿ ಅಲ್ಲ, ಅನೇಕವೇಳೆ ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೂಡ ನಮ್ಮ ದೇಶದಲ್ಲಿ ನೀರಾವರಿಯ ಪರಿಸ್ಥಿತಿ ಏನಿದೆ, ಅದಕ್ಕೆ ಯಾವ ರೀತಿ ಉತ್ತೇಜನವನ್ನು ಕೊಡಬೇಕು, ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಿನ್ನೆ ತಾನೇ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಕೂಡ ಸೂಕ್ಷ್ಮವಾಗಿ ಹೇಳಿದರು. ನೀರಾವರಿ ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಸ್ವಲ್ಪ ಅಂಕಿ ಅಂಶಗಳನ್ನು ಕೊಡಲು ಇಷ್ಟಪಡುತ್ತೇನೆ. ನಮ್ಮ ಸಂಸ್ಥಾನದಲ್ಲಿ ನೀರಾವರಿಗೆ ಯೋಗ್ಯವಾದ ಭೂಮಿ ಸುಮಾರು 35 ಮಿಲಿಯನ್ ಎಕರೆಗಳಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅದರಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ 1.7 ಮಿಲಿಯನ್ ಎಕರೆಗಳಷ್ಟು ನೀರಾವರಿ ಪ್ರದೇಶವಿತ್ತು ಎಂದು ಕೂಡ ಹೇಳುತ್ತಾರೆ. ಅದನ್ನು ನಾವು ಸೇಕಡಾವಾರು ಎಷ್ಟಾಗುತ್ತದೆ ಎಂದು ಲೆಕ್ಕ ಹಾಕಿದರೆ 4.7 ಆಗುತ್ತದೆ. ಈ ಮೂರು ಯೋಜನೆಗಳಲ್ಲಿ ಏನು ಕಾರ್ಯವನ್ನು ಸಾಧಿಸಿದ್ದೇವೆ ಎಂದು ಲೆಕ್ಕಾಚಾರ ಮಾಡಿದರೆ ಮೊದಲನೆ ಯೋಜನೆಯಲ್ಲಿ 11 ಭಾರಿ ನೀರಾವರಿ ಕೆಲಸಗಳನ್ನು ತೆಗೆದುಕೊಂಡಿದ್ದು ಅದರ ಅಂದಾಜು 83.72 ಕೋಟಿ ರೂಪಾಯಿಗಳು. ಅದರಲ್ಲಿ 37.28 ಕೋಟಿ ರೂಪಾಯಿಗಳನ್ನು ಖರ್ಚುಮಾಡ

ಲಾಗಿದೆ. ನಮಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ 1.17 ಲಕ್ಷ ಎಕರೆಗಳಿಗೆ ನೀರಾವರಿಯಾಗುವಷ್ಟು ಮಟ್ಟಿಗೆ ಏರ್ಪಾಡು ಮಾಡಿದೆವು. ಆದರೆ ಉಪಯೋಗವಾದ್ದು ಕೇವಲ 41 ಸಾವಿರ ಎಕರೆಗಳು ಎಂದು ಹೇಳುತ್ತಾರೆ. ಎರಡನೆಯ ಯೋಜನೆಯಲ್ಲಿ ನೋಡುವುದಾದರೆ ಮೊದಲನೆಯ ಯೋಜನೆಯ 11 ಯೋಜನೆಗಳ ಜೊತೆಗೆ 3 ಭಾರಿ ಪ್ರಮಾಣದ ಯೋಜನೆಗಳು ಮತ್ತು 11 ಮಧ್ಯಮ ಪ್ರಮಾಣದ ಯೋಜನೆಗಳನ್ನು ಪ್ರಾರಂಭ ಮಾಡಿದೆವು. ಅದರ ಸುಮಾರು ಒಟ್ಟು ವೆಚ್ಚ 129 ಕೋಟಿ ರೂಪಾಯಿಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಎರಡನೆಯ ಯೋಜನೆಯಲ್ಲಿ 26 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಸುಮಾರು 4 ಲಕ್ಷ ಎಕರೆ ನೀರಾವರಿ ಆಗುವ ರೀತಿ ಏರ್ಪಾಡುಗಳನ್ನು ಮಾಡಿಕೊಟ್ಟರು. ? ಅದರಲ್ಲಿ ಉಪಯೋಗಿಸಿರುವ ಭೂಮಿ 2,91, 000 ಎಕರೆಗಳು. ಮೂರನೆಯ ಯೋಜನೆಯಲ್ಲಿ 25 ಪ್ರಾಜೆಕ್ಟ್‌ಗಳ ಜೊತೆಗೆ 3 ಭಾರಿ ಪ್ರಮಾಣದ ಮತ್ತು 4 ಮಧ್ಯಮ ಪ್ರಮಾಣದ ಪ್ರಾಜೆಕ್ಟ್‌ಗಳನ್ನು ಕಟ್ಟಬೇಕೆಂದು ಯೋಜನೆಮಾಡಿ ಅದಕ್ಕೂ ಕೂಡ ಸುಮಾರು 99.11 ಕೋಟಿ ರೂಪಾಯಿಗಳನ್ನು ವೆಚ ಮಾಡಲು ಅಂದಾಜು ಮಾಡಿದ್ದಾರೆ. ಈ ಮೂರು ಯೋಜನೆಗಳಲ್ಲಿ ತೆಗೆದುಕೊಂಡಿರುವ ಕಾರ್ಯಗಳನ್ನು ಪೂರ್ತಿ ಮಾಡಬೇಕಾದರೆ 228.69 ಕೋಟಿ ರೂಪಾಯಿಗಳು ಬೇಕು ಎಂದು ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಲೋಕೋಪಯೋಗಿ ಶಾಖೆಯ ಮಂತ್ರಿಗಳ ಹೇಳಿದರು ಆಲಮಟ್ಟಿ ಮತ್ತು ನಾರಾಯಣಪುರ ಎರಡು ಕಡೆಗಳಲ್ಲಿಯೂ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು. ಇದಕ್ಕೆ ಸುಮಾರು 120 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಒಟ್ಟಿನಲ್ಲಿ 310 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅಷ್ಟೇ ಅಲ್ಲದೆ ನಾವು ಮಾತನಾಡುವಾಗ ನಮ್ಮ ದೇಶದಲ್ಲಿರತಕ್ಕ ಎರಡು ನದಿಗಳು ಎಂದರೆ ಕೃಷ್ಣ-ಗೋದಾವರಿ ಮತ್ತು ಕಾವೇರೀ ನದೀ ಪಾತ್ರಗಳ ನೀರನ್ನು ಉಪಯೋಗಿಸಿಕೊಳ್ಳಬೇಕಾದ ವಿಚಾರ ವನ್ನೂ ಹೇಳುತ್ತಿದ್ದೇವೆ. ಕಾವೇರಿ ನದಿ ನೀರಿನ ಸಂಬಂಧದಲ್ಲಿ ಮದ್ರಾಸ್ ಸರ್ಕಾರದ ಜೊತೆ ಯಲ್ಲಿ ನಾವು ಒಂದು ಅಗ್ರಿಮೆಂಟನ್ನು ಮಾಡಿಕೊಂಡಿದ್ದೇವೆ. ಅದರ ಸಂಪೂರ್ಣವಾದ ಫಲವನ್ನು ಹೊಂದಬೇಕು ಎಂದರೆ 1974ರ ಒಳಗಾಗಿ ನಮ್ಮ ಕಾರ್ಯಗಳನ್ನು ಪೂರೈಸಬೇಕು. ಅದರಲ್ಲಿ ಅಡಕವಾಗಿರುವ ಅಂಶವೆಂದರೆ ನಾವು ಕನ್ನಂಬಾಡಿಯಿಂದ ಈಗಾಗಲೇ ಉಪಯೋಗಿಸುತ್ತ ಇರತಕ್ಕ 59 ಟಿ. ಎಂ. ಸಿ. ನೀರನ್ನು ಬಿಟ್ಟರೂ ಕೂಡ 45 ಟಿ. ಎಂ. ಸಿ. ನೀರನ್ನು ಉಪಯೋಗಿಸಬೇಕಾದ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು. ಅದರ ಅಂದಾಜು, ಕಂಬದಕಡ ಮತ್ತು ಹಾರಂಗಿ ಅದರ ಉಪ ಅಣೆಕಟ್ಟುಗಳಿಗೆ ಸುಮಾರು 11 ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ಹೇಳುತ್ತಾರೆ. ಎಲ್ಲವನ್ನೂ ಪರಿಶೀಲನೆ ಮಾಡಿ ನೋಡಿದರೆ ಬರೀ ನೀರಾವರಿ ಯೋಜನೆಗಳಿಗಾಗಿ 300 ಕೋಟಿಗಿಂತ ಜಾಸ್ತಿ ಹಣ ಬೇಕಾಗುತ್ತದೆಂದು ಅಂದಾಜು ಮಾಡುತ್ತಿದ್ದಾರೆ. ಆದರೆ ನಮ್ಮ ಮುಂದೆ ಇರತಕ್ಕ ಪ್ರಸಕ್ತ ಸಾಲಿನ ಹಣಕಾಸಿನ ಆಯುವ್ಯಯ ಪಟ್ಟಿಯನ್ನು ನೋಡುವುದಾದರೆ ನೀರಾ ವರಿ ಕಾಮಗಾರಿಗಳಿಗಾಗಿ ಯಾವರೀತಿಯ ಉತ್ತೇಜನವನ್ನು ಕೊಟ್ಟುಕೊಂಡು ಬಂದಿದ್ದಾರೆಂದರೆ 10 ಕೋಟಿ ಬೇಕು ಎಂದು ಹೇಳಿದ್ದಾರೆ. ಅದೇ 1964-65ನೇ ಸಾಲಿನಲ್ಲಿ 786 ಲಕ್ಷ ರೂಪಾಯಿ ಗಳನ್ನು ಒದಗಿಸಿದ್ದಾರೆ. ಬಹುಶಃ ಆಂಧ್ರದವರು ನಾಗಾರ್ಜುನಸಾಗರ ಮತ್ತು ಶ್ರೀ ಶೈಲ ಯೋಜನೆಗಳಿಗೂ ಮದ್ರಾಸಿನವರು 1974ನೇ ಇಸವಿ ಮುಗಿದ ಮೇಲೆ ಕಾವೇರಿ ನೀರನ್ನು ಸರಿಯಾಗಿ ಉಪಯೊಗಿಸಲಿಲ್ಲವಾದ ಕಾರಣ ಉಳಿದ ನೀರಿನಲ್ಲಿ ನಮಗೂ ಪಾಲನ್ನು ಕೊಡಿ ಎಂದು ಕೇಳುತ್ತಾ ರೆಂಬುದಾಗಿ ಆ ಭಯದಿಂದ ಈ ಮನೆಯಲ್ಲಾಗಲೀ ಹೊರಗಡೆಯಲ್ಲಾಗಲೀ ಏನೇ ಆದರೂ ನೀರನ್ನು ಉಪಯೋಗಿಸಿಕೊಳ್ಳುತ್ತೇವೆ, ಕಟ್ಟೆಗಳನ್ನು ಕಟ್ಟುತ್ತೇವೆ ಎಂದು ಬರೀ ಹೇಳಿಕೆಗಳನ್ನು ಕೊಟ್ಟ ಮಾತ್ರಕ್ಕೆ ಇವೆಲ್ಲ ಕಾರ್ಯರೂಪಕ್ಕೆ ಬರುತ್ತದೆಯೆ ಎನ್ನುವ ಶಂಕೆ ಬಹಳವಾಗಿ ಕಾಣುತ್ತಿದೆ. ನಮಗೆ 300 ಕೋಟಿ ರೂಪಾಯಿ ಬೇಕು ಎನ್ನುವಾಗ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ $7\frac{3}{4}$ ಕೋಟಿ ರೂಪಾಯಿ ಇಷ್ಟು ಹಣವನ್ನು ಪ್ರತಿ ವರ್ಷ ಅಂದಾಜು ಮಾಡುತ್ತ ಹೋದರೆ ಅಪ್ಪರ್ ಕೃಷ್ಣ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ, ಕಾವೇರಿ ನದಿ ನೀರನ್ನು 1974ರ ಒಳಗಾಗಿ ಉಪಯೋಗಿಸಲು ಆಗುತ್ತದೆಯೇ, ಹೀಗೆ ಹಣವನ್ನು ಒದಗಿಸಿದರೆ ಎಷ್ಟು ಯೋಜನೆಗಳನ್ನು ಕಾರ್ಯರೂಪಕ್ಕೆ ತರಬಹುದು, ಈ ವಿಚಾರದಲ್ಲಿ ಸರ್ಕಾರ ಸಾಕಾದಷ್ಟು ಪ್ರಯತ್ನ ಮಾಡಲಿಲ್ಲವೋ ಏನೋ ಎಂದು ನನಗೆ ಶಂಕೆ ಯಾಗಿದೆ.

ಶರಾವತಿ ಪ್ರಾಜೆಕ್ಟ್ ಮುಗಿಯಬೇಕೆಂದು 16 ಕೋಟಿ ರೂಪಾಯಿಗಳನು ಒದಗಿಸಿದ್ದಾರೆ. ಇದು ಬೇಗ ಆಗಬೇಕಾದ ಕೆಲಸ. ಅದೇ ಕಾಲದಲ್ಲಿ ಬೇರೆ ನೀರಾವರಿ ಯೋಜನೆಗಳನ್ನು. ಕಾರ್ಯಗತ ಮಾಡಿ ಅದರ ನೀರನ್ನು ಉಪಯೋಗಿಸಿಕೊಳ್ಳಲು ಏನು ಮಾಡಿದ್ದೀರಿ, ಎಷ್ಟು ಕೋಟಿ ರೂಪಾಯಿಗಳ ಯೋಜನೆಗಳನ್ನು ಮಾಡಿಕೊಂಡಿದ್ದೀರಿ ಎಂದರೆ ನಾವು ನೀರನ್ನು ಉಪಯೋಗಿಸಿಕೊಳ್ಳುತ್ತೇವೆ, ಅದಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿಕೊಂಡಿದ್ದೇವೆ ಎಂದು ಬರೀ ಮಾತಿನಲ್ಲಿ ಹೇಳಿದರೆ ಸಾಲುವುದಿಲ್ಲ. ನಮ್ಮ ವಾರ್ಷಿಕ ಅಂದಾಜುಗಳಲ್ಲಿ ಸುಮಾರು 25—30 ಕೋಟಿ ರೂಪಾಯಿಗಳ

(ಶ್ರೀ ಎಂ. ಸಿ. ಬಸಪ್ಪ)

ನ್ನಾದರೂ ಆ ಯೋಜನೆಗಳಿಗೆ ಒದಗಿಸಬೇಕಾದ ಅವಶ್ಯಕತೆ ಇದೆ. ಹಣಕಾಸಿನ ಮಂತ್ರಿಗಳು ಆ ರೀತಿ ಒದಗಿಸಲು ಏನು ರಿಸೋರ್ಸೆಸ್ ಇವೆ, ಹಣವನ್ನು ಎಲ್ಲಿಂದ ಒದಗಿಸಬೇಕು ಎಂದು ಕೇಳುತ್ತಾರೆ. ನಿಜವಾಗಿ ಅವರು ಕೇಳಬೇಕಾದ ಪ್ರಶ್ನೆಯೇ. ನನಗೆ ಇಷ್ಟು ಅನ್ನಿಸುತ್ತದೆ. ತುರ್ತು ಪರಿಸ್ಥಿತಿಯಲ್ಲಿ ನಾವು ಕೆಲವು ಕ್ರಮಗಳನ್ನು ಯೋಚನೆ ಮಾಡಿದೆವು. ಕೆಲವು ಇಲಾಖೆಗಳಲ್ಲಿ ಎಷ್ಟೇ ಕಷ್ಟವಾದರೂ ಸ್ವಲ್ಪದಿವಸವಾದರೂ ಖರ್ಚನ್ನು ತಡೆ ಹಿಡಿಯಬೇಕು, ನೂರಕ್ಕೆ 10–15ರಷ್ಟು ಕಡಮೆ ಮಾಡಿ ಅದನ್ನು ಯೋಜನೆಗಳಿಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಸಲಹೆಗಳು ಕೂಡ ಬಂದುವು. ಆದರೆ ಕಾರ್ಯಗತ ಮಾಡುವಾಗ ನಾವು ಯಶಸ್ವಿಯಾಗಲಿಲ್ಲ ಎಂದರೆ ತಪ್ಪಾಗಲಾರದು. ಈ ವಿಷಯವನ್ನು ಯೋಚನೆ ಮಾಡಿ ಅದು ಯಶಸ್ವಿಯಾಗುವ ರೀತಿ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಹೇಳುವುದಲ್ಲದೆ ಕೇಂದ್ರ ಸರ್ಕಾರದವರು ಇಂಡಿಯಾ ದೇಶದಲ್ಲೆಲ್ಲ ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟಲು ಸಾಲದ ರೂಪದಲ್ಲಿ ಹಣವನ್ನು ಕೊಡುವ ಮೂಲಕವಾಗಲೀ ಅಥವಾ ಅವರೇ ಸ್ವತಃ ತೆಗೆದುಕೊಂಡು ಕಟ್ಟಿಸಿಕೊಟ್ಟಿರತಕ್ಕ ನಿದರ್ಶನಗಳು ನಮ್ಮ ಮುಂದೆ ಇವೆ. ಅಲ್ಲದೆ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಒಂದು ವಾಕ್ಯವನ್ನು ಹೇಳಿದ್ದಾರೆ. ಸುಮಾರು 10 ಕೋಟಿ ರೂಪಾಯಿಗಿಂತ ಜಾಸ್ತಿ ವೆಚ್ಚ ತಗಲತಕ್ಕ ಪ್ರಾಜೆಕ್ಟ್‌ಗಳನ್ನು ಕೇಂದ್ರದವರು ತೆಗೆದುಕೊಳ್ಳಬೇಕು, ಅದಕ್ಕೆ ಸಂಪೂರ್ಣವಾಗಿ ಆಗತಕ್ಕ ಹಣವನ್ನು ಕೊಡಬೇಕು.

Sri B. D. JATTI.—There is some difference. They should finance. Taking over and financing are quite different.

ಶ್ರೀ ಎಂ. ಸಿ. ಬಸಪ್ಪ.—ಬಹುಶಃ ಹತ್ತು ಕೋಟಿಗಿಂತ ಹೆಚ್ಚು ಖರ್ಚು ತಗಲತಕ್ಕ ಪ್ರಾಜೆಕ್ಟ್‌ಗಳಿಗೆ ಅಥವಾ ಯೋಜನೆಗಳಿಗೆ ಸಂಪೂರ್ಣವಾಗಿ ಹಣದ ಸಹಾಯವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳು ಆಸೆಪಟ್ಟಿದ್ದಾರೆ. ನಾನಾದರೂ ಸಹ ಹಣಕಾಸಿನ ಮಂತ್ರಿಗಳು ಹೇಳಿರುವುದಕ್ಕೆ ಒಂದು ಹೆಜ್ಜೆ ಮುಂದೆ ಹೋಗಿ ಇಂಥ ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರ್ಕಾರದವರೇ ತೆಗೆದುಕೊಂಡು ಅವರೇ ಕಟ್ಟಿಸಿ ಅದರಿಂದ ಬರತಕ್ಕ ಪ್ರಯೋಜನವನ್ನು ನಮ್ಮ ದೇಶಕ್ಕೆ ಅನ್ಯಾಯವಾಗದ ಹಾಗೆ ಹಣಕಾಸಿನ ನೆರವನ್ನು ಕೊಟ್ಟು ಸಹಾಯವನ್ನು ಮಾಡಬೇಕೆಂದು ಕೇಳಿದರೆ ತಪ್ಪಾಗಲಾರದು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಒಂದೇ ಅಂಶವನ್ನು ಹೇಳುವುದಾದರೆ, ನಮಗೆ ಬರಬೇಕಾದಷ್ಟು ನೀರನ್ನು ನಾವು ಅವರಿಂದ ಪಡೆಯಬೇಕು. ನಮ್ಮಲ್ಲಿರುವ ಹಣಕಾಸಿನಲ್ಲಿ ದುರ್ವ್ಯಯವಾಗುತ್ತಿದ್ದರೆ ಅದನ್ನು ನಿಲ್ಲಿಸಿ, ಎಲ್ಲೆಲ್ಲಿ ಯಾವ ಯಾವ ಇಲಾಖೆಗಳಲ್ಲಿ ಖರ್ಚು ಕಡಮೆ ಮಾಡಬಹುದೋ ಅದನ್ನು ಮಾಡಿ, ಹಣವನ್ನುಳಿಸಿ, ಅದನ್ನು ಭಾರಿ ನೀರಾವರಿ ಯೋಜನೆಗಳಿಗೆ ಉಪಯೋಗ ಮಾಡುವುದು ಒಳ್ಳೆಯದು. ಇದಕ್ಕೆ ಸರಕಾರ ಪ್ರಯತ್ನ ಮಾಡುತ್ತದೆ ಎನ್ನುವ ಆಶಯವನ್ನಿಟ್ಟುಕೊಂಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಹಣಕಾಸಿನ ಪರಿಸ್ಥಿತಿ ತಮಗೆ ಗೊತ್ತಿದೆ. ಈಗ ವ್ಯಯವಾಗುತ್ತಿರುವ ಹಣದಲ್ಲಿ ಖರ್ಚು ಕಡಮೆ ಮಾಡಿದರೆ ಅಷ್ಟರಿಂದಲೇ ಭಾರಿ ನೀರಾವರಿ ಯೋಜನೆಗಳಿಗೆ ಹಣ ಸಾಕಾಗುತ್ತದೆಯೆ ? ಇನ್ನಾವುದಾದರೂ ಸಲಹೆಯನ್ನು ಮಾಡುತ್ತೀರೋ ? ಕೇವಲ ಸರಕಾರದ ಖರ್ಚನ್ನು ಕಡಮೆ ಮಾಡುವುದರಿಂದ ಹತ್ತು ಕೋಟಿ ರೂಪಾಯಿಯೇನೂ ಉಳಿಯುವುದಿಲ್ಲ. ಈಗ ಸರಕಾರಿ ನೌಕರರಿಗೆ ತುಟ್ಟಿಭತ್ಯವನ್ನು ಹೆಚ್ಚುಮಾಡಬೇಕಾಯಿತು. ಬೇರೆ ಉತ್ಪನ್ನ ಮೂಲಗಳೇನಾದರೂ ಇವೆಯೆ ಈ ಭಾರಿ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಎಂಬುದನ್ನು ಹೇಳಿ.

ಶ್ರೀ ಗಂಗಾಧರ ನಾಮೋಷಿ.—ಪಾನನಿರೋಧವನ್ನು ರದ್ದು ಮಾಡಿದರೆ ಹತ್ತು ಕೋಟಿ ರೂಪಾಯಿ ಬರುತ್ತದೆ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಾನನಿರೋಧವನ್ನು ರದ್ದುಮಾಡುವುದು, ರೋಡ್ ಟ್ರಾನ್ಸ್‌ಪೋರ್ಟ್ ಆಡಳಿತವನ್ನು ಸರಿಪಡಿಸುವುದು ಇದನ್ನೆಲ್ಲ ಮಾಡಿದರೆ ಬೇಕಾದಷ್ಟು ಹಣ ಬರುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ಸಂಪನ್ಮೂಲಗಳನ್ನು ಗೊತ್ತು ಮಾಡುವುದು, ಹಣವನ್ನು ಸರಿಯಾಗಿ ಉಪಯೋಗ ಮಾಡುವುದು, ಇವೆಲ್ಲ ನನ್ನೊಬ್ಬನ ಕರ್ತವ್ಯವಲ್ಲ ; ಇತರ ಸದಸ್ಯರೂ ಯೋಚನೆ ಮಾಡಿ ಸರಕಾರಕ್ಕೆ ಸಲಹೆ ಕೊಡುತ್ತಾರೆ. ನಾನಾದರೂ ಹೇಳುವುದಿಷ್ಟು: ಕೃಷ್ಣ, ಕಾವೇರಿ ನೀರನ್ನು ಉಪಯೋಗ ಮಾಡುತ್ತೇವೆ ಎಂದು ಹೇಳಿದರೆ ಮಾತ್ರ ಸಾಲದು. ಈ ಎರಡು ನದಿಗಳ ಆಶ್ರಯದಲ್ಲಿ ಕಟ್ಟಬೇಕಾದ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಬೇಕಾದ ಹಣವನ್ನು ಕೇಂದ್ರದ ನೆರವಿನಿಂದಲೂ ಮಿತವ್ಯಯಮಾಡುವುದರಿಂದಲೂ ಪಡೆದು ಮಾಡಬೇಕೆಂದು ಹೇಳಿದ್ದೇನೆ. ಹೆಚ್ಚಿನ

ಸಂಪನ್ಮೂಲಗಳನ್ನು ಪಡೆಯಲು ಸರಕಾರ ಯೋಚಿಸಿದರೆ ಅದಕ್ಕೆ ನನ್ನ ಅಡ್ಡಿಯಿಲ್ಲ. ಇದಕ್ಕಾಗಿ ದೇಶದಲ್ಲಿ ಹೆಚ್ಚು ತೆರಿಗೆ ಹಾಕಬೇಕೆಂದು ಹೇಳಿದರೆ ಅದಕ್ಕೂ ಸಿದ್ಧವೆಂದು ಹೇಳಿದರೆ ತಪ್ಪಾಗಲಾರ ದೆಂದು ನನ್ನ ಅಭಿಪ್ರಾಯ. ಏಕೆಂದರೆ ನಾವು ನೀರಾವರಿ ಕೆಲಸಗಳನ್ನು ಮಾಡದೇಯಿದ್ದರೆ ಆ ನೀರು ಬೇರೆಯವರಿಗೆ ಹೋಗುತ್ತದೆಂದು ಹೇಳುವಾಗ ಹೇಗಾದರೂ ಮಾಡಿ ನಾವು ಮಾಡಬೇಬೇಕು.

ಎರಡನೆಯದಾಗಿ, ನಮ್ಮ ಮೈನರ್ ನೀರಾವರಿಗಳ ವಿಚಾರದಲ್ಲಿ ಒಂದು ಸಲಹೆಯನ್ನು ಹೇಳ ಬೇಕಾಗಿದೆ. ಲಿಬರಲೈಸ್ಡ್ ಯೋಜನೆಯಲ್ಲಿ ನಾವು ಬಾವಿಗಳನ್ನು ತೆಗೆಸಿದ್ದೇವೆಂದು ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಕೆರೆಕಟ್ಟೆಗಳನ್ನು ರಿಪೇರಿ ಮಾಡಿ ಸುಮಾರು 49 ಸಾವಿರ ಎಕರೆಗಳನ್ನು ನೀರಾವರಿ ಮಾಡಿದ್ದೇವೆಂದು ಹೇಳಿದರು. ಸುಮಾರು ಐದು ವರ್ಷಗಳಲ್ಲಿ ಮಾಡಬೇಕಾದ ಕಾರ್ಯ ವನ್ನು ಮೂರು ವರ್ಷದಲ್ಲಿ ಮಾಡಿ ಮುಗಿಸಿದ್ದೇವೆಂದು ಹೇಳಿದ್ದಾರೆ. ಕೆಲವು ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ನಾವು ಹಿಂದು ಮುಂದೆ ನೋಡುತ್ತೇವೆ. ಕಳೆದ ವರ್ಷ ಹಾಗೂ ಈ ವರ್ಷದ ಬಡ್ಜೆಟ್ಟನ್ನು ನೋಡಿದ್ದೇವೆ. ಇದರಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ ಇದೆ. ಈ ಯೋಜನೆಯಲ್ಲಿ ಜನರಿಗೆ ಹೇಗೆ ಸಹಾಯ ಕೊಡಬೇಕೆಂದು, ಕೊಟ್ಟಿದೆಯೆಂಬುದನ್ನು ಯೋಚನೆ ಮಾಡಿದರೆ ಬಹುಶಃ ನಾವು ಶೇಕಡ ಆರರಷ್ಟರಲ್ಲೇ ಉಳಿಯುತ್ತೇವೆ, ಮದರಾಸಿನವರು ಮೂವ ತ್ತೆಂಟರ ಮೇಲೆ ಹೋಗುತ್ತಾರೆಂದು ಕಾಣುತ್ತದೆ. ಸಹಕಾರ ಸಂಘಗಳ ಮೂಲಕ ಈ ಸಹಾಯ ವನ್ನು ಕೊಡಬೇಕೇ ಅಥವಾ ಸರಕಾರ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಹಾಕಿ ಹಣವನ್ನು ತೆಗೆದುಕೊಳ್ಳಬೇಕೇ ಎಂಬ ವಿಚಾರವಿದೆ. ನೀರಾವರಿ ಸಂಬಂಧವಾಗಿ, ನೀರನ್ನು ಉಪಯೋಗ ಮಾಡಿಕೊಂಡು ಹೆಚ್ಚು ಬೆಳೆ ಬೆಳೆಯುವ ಸಂದರ್ಭದಲ್ಲಿ ಸರಕಾರ ತುರ್ತು ತೀರ್ಮಾನ ತೆಗೆದುಕೊಳ್ಳ ಬೇಕಾದುದು ಅವಶ್ಯಕ. ಕಳೆದು ಹೋದ ಕಾಲವನ್ನು ಪುನಃ ಗಳಿಸುವುದಕ್ಕೆ ಸಾಧ್ಯವಿಲ್ಲ. 1974ನೆಯ ಇಸವಿಯೊಳಗಾಗಿ ನಾವು ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದಿರುವ ಒಪ್ಪಂದದ ಪ್ರಕಾರ, ಆಮೇಲೆ ಕಾಮನ್ ಪೂಲ್‌ಗೆ ಹೆಚ್ಚಿಗೆ ನೀರನ್ನು ಕೊಡಬೇಕೆಂದು ಕೇಳಿದರೆ, ತಾಳಿ ಎಂದು ಅವರಿಗೆ ನಾವು ಹೇಳುವುದಕ್ಕಾಗುವುದಿಲ್ಲ. ಲಿಫ್ಟ್ ಇರಿಗೇಷನ್ನಿಗೆ ಒದಗಿಸಿರುವ ಹಣವನ್ನು ಈ ವರ್ಷವಾದರೂ ಖರ್ಚು ಮಾಡಬೇಕು. ಒದಗಿಸಿರುವ ಹಣವಾದರೂ ಕಡಮೆ. ಒಂದೇ ನದಿಗೆ ಇದೇ ರಾಜ್ಯದಲ್ಲಿ ಎರಡು ಮೂರು ಕಡೆ ಒದಗಿಸಬೇಕೆಂದು ಮಾಡಿದ್ದಾರೆ. ದೇಶದಲ್ಲಿರುವ ಎಲ್ಲ ನದಿಗಳಿಂದಲೂ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದೆ. ಹೆಚ್ಚು ನೀರಾವರಿ ಮಾಡುವುದಕ್ಕೆ ಅವಕಾಶವಿದೆ. ಆದಕಾರಣ ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು ದೇಶದಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಮೂಲಕ ನದಿಗಳ ನೀರನ್ನು ಉಪಯೋಗ ಮಾಡಬಹುದೋ ಅಲ್ಲೆಲ್ಲ ಮಾಡಬೇಕು. ಅಂಥ ಕಡೆಗಳಲ್ಲಿ ವಿದ್ಯುಚ್ಛಕ್ತಿ ಪಂಪುಗಳನ್ನೂ ಹಾಕಬೇಕಾಗುತ್ತದೆ. ಅದರಿಂದ ನೀರು ಸರಬರಾಯಿ ಮಾಡಿ ಹೆಚ್ಚು ನೀರಾವರಿ ಮಾಡಲು ಏರ್ಪಾಡು ಮಾಡುವುದು ಸರಕಾರದ ಕರ್ತವ್ಯ. ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಬೇಗ ಕಾರ್ಯಗತ ಮಾಡಬೇಕು. ಅಗತ್ಯವಿದ್ದರೆ ಹೆಚ್ಚು ಹಣವನ್ನು ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಕೇಳಿ ಜನರಿಗೆ ಸೌಕರ್ಯನ್ನೊದಗಿಸ ಬೇಕೆಂದು ಸೂಚಿಸುತ್ತೇನೆ.

ರೈತನಿಗೆ ಮುಖ್ಯವಾಗಿ ಬೇಕಾದ ವಿದ್ಯುಚ್ಛಕ್ತಿಯನ್ನೊದಗಿಸಿದ್ದೇವೆಂದು ಹೇಳಿಕೊಂಡಿರುವುದಲ್ಲದೆ, ಆಹಾರ ಧಾನ್ಯಗಳ ಬೆಲೆ ಬಿದ್ದು ಹೋಗದ ಹಾಗೆ ನೋಡಿಕೊಂಡಿದ್ದೇವೆಂದೂ ಹೇಳಿಕೊಂಡಿದ್ದಾರೆ. ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಿದೆಯೆಂದೂ ಒಂದು ವಾದವಿದೆ. ಇದನ್ನು ತಡೆಗಟ್ಟಬೇಕೆಂದು ಹೇಳುತ್ತಿದ್ದಾರೆ. ನಾನು ರೈತನ ಕಷ್ಟಸುಖಗಳನ್ನರಿತವನಾಗಿ ಈ ವಿಷಯದಲ್ಲಿ ನನ್ನ ಅಭಿಪ್ರಾಯ ವನ್ನು ಹೇಳುತ್ತೇನೆ. ಕೊಂಡುತಿನ್ನುವ ಜನರು ಜಾಸ್ತಿ ಎಂದು ಹೇಳುವುದು ನಿಜ. ಆದರೆ ಬೆಳೆಯು ವವನಿಗೆ ನಿಗದಿಯಾದ ಧಾರಣೆಯಿರುವ ಧೈರ್ಯವನ್ನು ಕೊಡದೇಹೋದರೆ ಅವನು ವ್ಯವಸಾಯವನ್ನು ಹೇಗೆ ಧೈರ್ಯದಿಂದ ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕು. ಈ ವರ್ಷ ಬತ್ತಕ್ಕೆ ಈ ಸೌಕರ್ಯವನ್ನೊದಗಿಸಿದ್ದೇವೆಂದು ಹೇಳಿರುವುದರಿಂದ ಬತ್ತ ಬೆಳೆಯುವ ರೈತ ಅದಕ್ಕೆ ಬೇಕಾದ ಗೊಬ್ಬರ ಹಾಕುವುದಕ್ಕೂ ಇಂಟರ್‌ಕಲ್ಚರ್ ಮಾಡುವುದಕ್ಕೂ ಧೈರ್ಯವಾಗಿ ಹಣವನ್ನು ಹಾಕುತ್ತಾನೆ. ಏಕೆಂದರೆ ಬತ್ತವನ್ನು ಬೆಳೆದರೆ ತನಗೆ ಸರಿಯಾದ ಬೆಲೆ ಸಿಕ್ಕುತ್ತದೆಂದು ಹಾಗೆ ಮಾಡುತ್ತಾನೆ. ಅದೇ ಕಬ್ಬಿನ ಬೆಳೆಯನ್ನು ತೆಗೆದುಕೊಳ್ಳುವುದಾದರೆ, ಈ ಸಾಲಿನಲ್ಲಿ ಹೆಚ್ಚು ಬೆಳೆ ಬಂತೆಂದು ಹೇಳು ತ್ತಾರೆ, ಅದು ನಿಜ ; ಎರಡು ವರ್ಷಗಳ ಹಿಂದೆ ಇದೇ ಕಬ್ಬಿಗೆ ಶೇಕಡ 25ರಷ್ಟು ಬೆಲೆ ಕೂಡ ಸಿಕ್ಕಲಿಲ್ಲ. ಒಂದು ಎಕರೆ ಕಬ್ಬು ಬೆಳೆಯಬೇಕಾದರೆ ಎಕರೆಗೆ ಒಂದು ಸಾವಿರದ ಐನೂರು ರೂಪಾಯಿಗಳ ವರೆಗೆ ಖರ್ಚು ಹಾಕಬೇಕಾಗುತ್ತದೆ. ಮೂರು ಸಾರಿ ಇಂಟರ್ ಕಲ್ಟಿವೇಷನ್ ಮಾಡಿ ಗೊಬ್ಬರ ಹಾಕಬೇಕಾಗುತ್ತದೆ. ಎರಡು ವರ್ಷಗಳ ಹಿಂದಿದ್ದ ಬೆಲೆ ರೈತನಿಗೆ ಸಿಕ್ಕಿದರೆ ಈಗ ಯಾರೂ ಕಬ್ಬು ಬೆಳೆಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಹಾಕಿದ ಹಣ ವಾಪಸ್ಸು ಬರುವುದಿಲ್ಲ. ಅಧಿಕ ಬೆಳೆ ಬೆಳೆದು ಸಂಪಾದನೆ ಮಾಡುವುದಕ್ಕೆ ಬದಲು ತನ್ನ ಆಸ್ತಿಯನ್ನು ಮಾರಿಕೊಳ್ಳಬೇಕಾದ ಸ್ಥಿತಿ

(ಶ್ರೀ ಎಂ. ಸಿ. ಬಸಪ್ಪ)

ಬರುತ್ತದೆ. ಆದಕಾರಣ ಒಂದು ಕಾರ್ಯಕ್ರಮ ಹಾಕಿಕೊಂಡು ಬೆಳೆಯುವ ರೈತನಿಗೆ ಅವನು ಬೆಳೆಯುವ ಧಾನ್ಯಕ್ಕೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು. ದಾರಣೆಗಳು ಕಡಮೆಯಾಗುವುದರಿಂದ ನಷ್ಟವಾಗಬಾರದು. ಹೀಗಾದರೆ ವ್ಯವಸಾಯೋತ್ಪನ್ನವನ್ನು ಹೆಚ್ಚು ಮಾಡಲು ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಸರಕಾರ ಎಷ್ಟು ಪ್ರೋತ್ಸಾಹ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಆದರೆ ಒಂದು ಸಂತೋಷದ ವಿಷಯ, ಈ ಕಾರ್ಯವನ್ನು ಪ್ರಾರಂಭಮಾಡಿದ್ದಾರೆ.

6-00 P.M.

ಕಳೆದಸಾರಿ ಒಂದು ಬೆಳೆಗೆ ಕೊಟ್ಟಿದ್ದಾರೆ, ಬರುವ ವರ್ಷ ಎಲ್ಲ ಬೆಳೆಗಳಿಗೂ ಇಂತಹ ಸೌಕರ್ಯ ಕೊಡುವುದರಿಂದ ಬೆಳೆಯುವ ರೈತರಿಗೆ ಅನುಕೂಲವಾಗುತ್ತದೆ.

ಸ್ವಾಮಿ, ಇನ್ನು ಹೆಚ್ಚು ವಿಷಯ ಪ್ರಸ್ತಾಪ ಮಾಡದೆ ಇನ್ನೆರಡು ನಿಮಿಷಗಳಲ್ಲಿ ನನ್ನ ಭಾಷಣ ಮುಗಿಸುತ್ತೇನೆ. ಅಗ್ರಿಕಲ್ಚರ್ ವಿಚಾರದಲ್ಲಿ ಅಂಕಿಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆ ಹಾಕಬೇಕು. ಇಲ್ಲದಿದ್ದರೆ ನಮ್ಮ ಯೋಜನೆ ನಿಷ್ಫಲವಾಗುತ್ತದೆ. ಸೀಡ್ ಮಲ್ಟಿಪ್ಲಿಕೇಷನ್ ವಿಚಾರದಲ್ಲಿ ಹೇಳುವುದಾದರೆ ಬೀಜ ಉತ್ಪತ್ತಿ ಮಾಡಿ ವ್ಯವಸಾಯಗಾರರಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಈ ಅಂಕಿ ಸಂಖ್ಯೆಗಳಿಗೆ ಆಧಾರವೇನು ? ಹೊಸದಾಗಿ ಪ್ರೊಡಕ್ಷನ್ ಪ್ಲಾನ್ ಎಂದು ಮಾಡಿದ್ದಾರೆ. ಪಂಚಾಯಿತಿ ಮುಖಾಂತರ ಕೂಡ ಗ್ರಾಮಗಳಲ್ಲಿ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಿದೆ, ನಿಜವಾಗಿಯೂ ಹೆಚ್ಚು ಮಾಡಿದ್ದೇವೆ ಎಂದು ಹೇಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದರೆ ಇದರಲ್ಲಿ ಸತ್ಯಾಂಶ ಎಷ್ಟಿದೆ ಎಂಬುದು ಗೊತ್ತಾಗುವುದಿಲ್ಲ. ವಾಸ್ತವವಾಗಿ ಕಾರ್ಯರೂಪದಲ್ಲಿ ಎಷ್ಟು ಸಾಧನೆಯಾಗಿದೆ ಎಂಬುದು ತಿಳಿದುಬರುವುದಿಲ್ಲ. ಆದುದರಿಂದ ಈ ವಿಚಾರವಾಗಿ ಜನರಿಗೆ ತಿಳುವಳಿಕೆ ಕೊಡಬೇಕು. ಜನರಿಗೆ ನಂಬಿಕೆ ಉಂಟಾಗುವಂತೆ ಮಾಡಬೇಕು. ಅಧಿಕಾರಿಗಳು ಕೂಡ ಸತ್ಯಾಂಶದಿಂದ ಕೂಡಿದ ಅಂಕಿಅಂಶಗಳನ್ನು ಒದಗಿಸಬೇಕು. ಅವರು ಮನಸ್ಸಿನಲ್ಲಿ ಭಯ ಸಂಶಯಗಳನ್ನು ಇಟ್ಟುಕೊಳ್ಳಬೇಕಾಗಿಲ್ಲ. ನಿಜವಾಗಿಯೂ ಸತ್ಯದಿಂದ ನಡೆದರೆ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಸರಕಾರ ಇದನ್ನು ಪರಿಶೀಲನೆ ಮಾಡಿ ಅಧಿಕಾರಿಗಳಿಗೆ ಸೂಕ್ತ ಕಾರ್ಯಕ್ರಮ ಹಾಕಿಕೊಟ್ಟು ಕೆಲಸ ನಡೆಸಿದರೆ ಆಗ್ಗೆ ಈ ಯೋಜನೆ ಯಶಸ್ವಿಯಾಗಲು ನೆರವಾಗುತ್ತದೆ ಎಂದು ಸಲಹೆಗಳನ್ನು ಕೊಟ್ಟು ನನ್ನ ಮಾತು ಮುಗಿಸುತ್ತೇನೆ.

Mr. SPEAKER.—The House will now adjourn to meet at 12-30 P.M tomorrow.

The House adjourned at Five Minutes past Six of the Clock to meet again at Thirty Minutes past Twelve of the Clock on Friday, the 6th March 1964.

WD 2484—GPB—900—9-5-61

MYSORE LEGISLATIVE ASSEMBLY

EIGHTH DAY.

Friday, 6th March 1964.

The House met in the Assembly Hall, Vidhana Soudha, Bangalore at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

Adult Education Centres in Shorapur Taluk, Gulbarga District.

**Q.*—8. Sri RAJA PID NAIK (Shorapur).—

Will the Government be pleased to state :—

(*a*) the number of Adult Education Centres in Shorapur Taluk, Gulbarga District ;

(*b* the number of Adults attending such Centres as on 1st January 1963 ;

(*c*) if there are no Centres at present, when they are going to provide them ?

A.—Sri S. R. KANTHI (Minister for Education).—

(*a*) Nil.

(*b*) Does not arise in view of (*a*).

(*c*) During 1964-65.

ಶ್ರೀ ಗೋಪಾಲ ಸಾರೆನ್ನ.—ವಯಸ್ಕರ ವಿದ್ಯಾಭ್ಯಾಸ ಕ್ರಮವನ್ನು ಪ್ರಾರಂಭ ಮಾಡಲು ಸರ್ಕಾರದ ನಿರ್ದಿಷ್ಟವಾದ ನೀತಿ ನಿಯಮಗಳೇನಾದರೂ ಇವೆಯೇ ?

Sri S. R. KANTHI.—Sir, at present there are different systems. In the Education Department there is one system and in the N. E. S. there is another system. Now Government are rethinking of amalgamating and taking charge of the entire adult education, *i.e.*, social education as it is called.

ಶ್ರೀ ಸಿ. ಆರ್. ರಂಗೇಗೌಡ.—ಇದುವರೆಗೂ ಹಳೇ ಮೈಸೂರು ಭಾಗದಲ್ಲಿ ಇದ್ದ ವಯಸ್ಕರ ಶಿಕ್ಷಣ ಸಮಿತಿ ಕೆಲಸ ಮಾಡುತ್ತಿದೆ. ಇದಕ್ಕೆ ವರ್ಷಕ್ಕೆ ಐದು ಲಕ್ಷ ರೂಪಾಯಿ ಪ್ರಕಾರ ಹಣ ಕೊಡುತ್ತಿದ್ದಿರಿ. ಹೊಸ ರಾಜ್ಯ ಆದಮೇಲೆ ಅದರ ಕಾರ್ಯವ್ಯಾಪ್ತಿ ಜಾಸ್ತಿಯಾಗಿದೆ. ಇದಕ್ಕೆ ಈಗ ಎಷ್ಟು ಹಣವನ್ನು ಒದಗಿಸಿದ್ದೀರಿ ?

Sri S. R. KANTHI.—What has been allotted for the next year has been shown in the budget.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಯಸ್ಕರ ವಿದ್ಯಾಭ್ಯಾಸ ಕ್ರಮವನ್ನು ಅಡಲ್ಟ್ ಎಜುಕೇಷನ್ ಕೌನ್ಸಿಲನಿಂದ ವಿದ್ಯಾ ಇಲಾಖೆಗೆ ವಹಿಸಿದರೆ ಬಹಳ ಪರಿಣಾಮಕಾರಿಯಾಗಿ ಕೆಲಸಮಾಡುತ್ತದೆ ಎಂದು ಹಿಂದೆ ವಿದ್ಯಾಮಂತ್ರಿಗಳು ಅಪ್ಪಣೆ ಕೊಡಿಸಿದರು. ಈ ಕಾರ್ಯವನ್ನು ವಿದ್ಯಾ ಇಲಾಖೆಗೆ ವಹಿಸಿ ಕೊಡುವುದರಲ್ಲಿ ಏನು ನಿಲುವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಹೇಳಿದ ಹಾಗೆ ವಿದ್ಯಾ ಇಲಾಖೆಗೆ ಎಲ್ಲವನ್ನೂ ತೆಗೆದುಕೊಳ್ಳಬೇಕು, ಅದು ಸೂಕ್ತ. ಮುಂದಿನ ಏಪ್ರಿಲ್‌ನಿಂದ ಸೋಷಿಯಲ್ ಎಜುಕೇಷನ್ ಆಫೀಸರ್ ಅವರು, ಎಲ್ಲರೂ ವಿದ್ಯಾಭ್ಯಾಸ ಇಲಾಖೆಗೆ ವರ್ಗವಾಗುತ್ತಾರೆ.

Sri GANJI VEERAPPA.—Who has the administrative control over this, Sir ?

Sri S. R. KANTHI.—Sir, at present in the old Mysore area we have what is called the State Adult Education Council and it is dealing with this matter. In the integrated areas we have certain Committees. On the whole, it is with the D. P. I.

Sri J. P. SARWESH.—What will be the basic pay of these teachers who will be in these centres ?

Sri S. R. KANTHI.—Sir, the Hon'ble Member knows that the S. E. Os. salary is fixed by the Development Department and Adult Education work is looked after by the Adult Education Council and they are paying according to their salary scales.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಹೊಸದಾಗಿ ವಿದ್ಯಾ ಇಲಾಖೆಗೆ ವಹಿಸುವ ಏರ್ಪಾಡು ಮಾಡುವುದರಿಂದ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸದಲ್ಲಿದ್ದವರ ಭವಿಷ್ಯ ಏನಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ವಯಸ್ಕರ ಶಿಕ್ಷಣ ಸಮಿತಿಯವರ ವ್ಯಾಪ್ತಿ ಹಳೆಯ ಮೈಸೂರಿಗೆ ಮಾತ್ರ ಇತ್ತು. ಈಗ ಅದನ್ನು ರೀ ಆರ್ಗನೈಜ್ ಮಾಡಿ ಅದರ ಕ್ಷೇತ್ರ ಇಡೀ ಹೊಸ ಮೈಸೂರಿಗೆ ಅನ್ವಯಿಸುವಂತೆ ಮಾಡುತ್ತಿದ್ದೇವೆ. ಇನ್ನು ಮುಂದೆ ವಯಸ್ಕರ ಶಿಕ್ಷಣ ಸಮಿತಿಯವರು ನಡೆಸಬೇಕೋ ಅಥವಾ ಸರ್ಕಾರದವರು ನಡೆಸಬೇಕೋ ಎನ್ನುವ ವಿಚಾರವು ಇದೆ. ಸರ್ಕಾರದವರು ತೆಗೆದುಕೊಂಡರೆ ಅಲ್ಲಿ ಕೆಲಸಮಾಡುತ್ತ ಇರುವವರನ್ನು ಯಾವ ರೀತಿ ಅಬ್ಸಾರ್ಬ್ ಮಾಡಬೇಕು ಎನ್ನುವುದನ್ನು ಸರ್ಕಾರ ವಿಚಾರ ಮಾಡುತ್ತದೆ.

Sri RAJA PID NAIK.—Sir, when and how many centres do Government intend to open ?

†Sri S. R. KANTHI.—Recently N. E. S. has been introduced there. They will open ten centres and each centre will contain 25 trainees.

Sri J. P. SARWESH.—May I know where these centres would be started ?

Sri S. R. KANTHI.—The places have not been fixed.

Sri GANGADHAR NAMOSHI.—Have you received any applications from those taluks to open those centres ?

Sri S. R. KANTHI.—I am not aware of such applications.

Sri G. DUGGAPPA.—Sir, Government had constituted one committee called the Central Committee for Adult Education Council. May I know whether it exists and if it exists, whether it functions ?

†Indicates that the remarks or speeches have not been revised by the member concerned.

Sri S. R. KANTHI.—Sir, The Adult Education Council is an executive body whereas the State Social Education Advisory Council is only an advisory body. These are two different bodies. Both are existing.

Sri G. DUGGAPPA.—May I know whether that Council for social education continues to function ?

Sri S. R. KANTHI.—Yes.

Appointing as Primary School Teachers.

*Q.—124. Sri H. D. DEVE GOWDA (Holenarasipur).—

Will the Government be pleased to state :—

(a) whether they intend appointing as Primary School Teachers those who have passed Lower Secondary Public Examinations ;

(b) the number of candidates who have passed Lower Secondary Examination and who have been enlisted by Public Service Commission for appointment as teacher prior to 1956 (districtwar information may be furnished) ;

(c) out of them, the number of persons appointed ;

(d) the reasons for the delay in appointing them ;

(e) whether it is not a fact that P.S C. has called for applications in 19 8 for purpose of enlisting the candidates who have passed Lower Secondary for the purpose of enlisting them for appointment as teachers ;

(f) the number of applications received in this behalf ;

(g) whether these applicants have been enlisted by the Public Service Commission ;

(h) if not, the reasons for the same ?

A.—Sri S. R. KANTHI (Minister for Education).—

(a) Yes, only lady candidates.

(b) and (c) the information is given in the statement given below.

(d) Non-availability of vacancies.

(e) Yes.

(f) 16,309.

(g) No.

(h) The minimum qualification had in the meanwhile been raised to S.S.L.C. with Teacher Training Certificate.

(SRI S.R. KANTHI)

STATEMENT

DISTRICT-WISE

Name of the District.		Number of candidates enlisted.		Number of candidates appointed.
Bangalore City District	...	203	...	Nil
Bangalore District	...	180	...	...
Tumkur District	...	904	...	829
Mysore District	...	325	...	...
Mandya District	...	536	...	177
Chirtadurga District	...	1,319	...	464
Chickmagalore District	...	113	...	39
Bellary District	...	...	...	...
Hassan District	...	444	...	367
Shimoga District	...	1,434	...	1,434
Kolar District	...	255	...	93
Total	...	5,713	...	3,403

ಶ್ರೀ ಎಚ್. ಡಿ. ದೇವೇಗೌಡ.—ಲೋಯರ್ ಸೆಕಂಡರಿ ಪಾಸ್ ಮಾಡಿರುವ ಹೆಣ್ಣು ಮಕ್ಕಳನ್ನು ಮಾತ್ರ ನೇಮಕ ಮಾಡಿಕೊಳ್ಳತಕ್ಕದ್ದು ಎಂದು ನಿರ್ಧಾರ ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಅದೇ ರೀತಿ ಗಂಡಸರ ವಿಷಯದಲ್ಲಿಯೂ ಏಕೆ ಆಗಬಾರದು ಎನ್ನುವ ಬಗ್ಗೆ ಯಾವಾಗ ನಿರ್ಣಯ ತೆಗೆದುಕೊಳ್ಳುತ್ತೀರಿ ?

† Sri S. R. KANTHI.—Sir, in 1959 Government took a decision that the S.S.C. or S.S.L.C. candidates should be appointed. After that, Government discontinued appointing L.S. male candidates except non-S.S.L.C. trained candidates who were trained before 1st June 1961.

ಶ್ರೀ ಎಚ್. ಡಿ. ದೇವೇಗೌಡ.—1956ರಲ್ಲಿ ಲೋಯರ್ ಸೆಕಂಡರಿ ಪಬ್ಲಿಕ್ ಪರೀಕ್ಷೆಯಾಗಿತ್ತು. ಆಗ ಪಾಸ್ ಮಾಡಿರುವವರನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಇಂಟರ್‌ವ್ಯೂ ಮಾಡಿ ಅವರ ಹೆಸರು ರಿಜಿಸ್ಟರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅವರು ಐದು ಸಾವಿರ ಚಿಲ್ಲರೆ ಜನರ ಒಂದು ಪಟ್ಟಿಯನ್ನು ಮಾಡಿದರು. ಆದರಲ್ಲಿ ಮೂರು ಸಾವಿರ ಜನಗಳಿಗೆ ಕೆಲಸ ಸಿಕ್ಕಿದೆ. ಉಳಿದವರಿಗೆ ಜಾಗ ಇಲ್ಲದ್ದರಿಂದ ಸಿಕ್ಕಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಅವರ ಹೆಸರು ರಿಜಿಸ್ಟರಾದ ಮೇಲೆ ಮೂರು ಸಾವಿರ ಜನಕ್ಕೆ ಕೆಲಸಕೊಟ್ಟಿದ್ದೇವೆ, ಉಳಿದವರಿಗೆ ಕೆಲಸ ಸಿಕ್ಕಲಿಲ್ಲವೆಂದು ಹೇಳುತ್ತೀರಿ. ಯಾರಿಗೆ ಕೆಲಸ ಸಿಕ್ಕಲಿಲ್ಲವೋ ಅವರು ಎಲ್. ಎಸ್. ಪರಿಕ್ಷೆಯಲ್ಲಿ ತೇರ್ಗಡೆ ಹೊಂದಿದವರು. ಅವರ ಹೆಸರುಗಳು ರಿಜಿಸ್ಟರಾದಾಗ ಉಪಾಧ್ಯಾಯರ ಕೆಲಸಕ್ಕೆ ಸೇರಲು ಬೇಕಾದ ಅರ್ಹತೆಯನ್ನು ಹೊಂದಿದ್ದರು. ಆ ಅರ್ಹತೆಯನ್ನು ಈಚೆಗೆ ಹಿಂತೆಗೆದುಕೊಂಡದ್ದರಿಂದ ಅವರಿಗೆ ಅನ್ಯಾಯವಾಗಲಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆಯನ್ನು ಲಾ ಡಿಪಾರ್ಟ್‌ಮೆಂಟಿಗೆ ಕಳಿಸಿ ಅವರ ಅಭಿಪ್ರಾಯವನ್ನು ಪಡೆದಿದ್ದೇವೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಪಟ್ಟಿಯನ್ನು ಕಳಿಸಿದ ಮೇಲೆ ಅದಕ್ಕೆ ಇದ್ದ ಅರ್ಹತೆಯನ್ನು ಬದಲಾಯಿಸಿದ್ದರಿಂದ ಅವರಿಗೆ ಏನೂ ಹಕ್ಕಿರುವುದಿಲ್ಲ ಎಂದು ತಿಳಿಸಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಪಟ್ಟಿಯಲ್ಲಿ 5713 ಜನರನ್ನು ಸೇರಿಸಿ, 3403 ಜನರಿಗೆ ಮಾತ್ರ ಕೆಲಸಗಳನ್ನು ಕೊಟ್ಟಿದೆ, ಬಾಕಿಯವರಿಗೆ ವಯೋಮಿತಿ ಮೀರಿಹೋದರೆ ಅವರ ಗತಿ ಏನು ?

